## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 41 /2020-21 ದಿನಾಂಕ:11.02.2022

**-:ದಿನಾಂಕ:11.02.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ11.02.2022 ರ ಶುಕ್ರವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3. | ಶ್ರೀ.ಟಿ.ಆರ್ ಸತೀಶ್ | ಅಯ್ಯಪ್ಪನಗರ | ಹಾಜರಿದ್ದರು. |
| 4. | ಶ್ರೀ. ಲೋಕೇಶ್ ರೆಡ್ಡಿ | ಸಾದರಮಂಗಲ | ಹಾಜರಿದ್ದರು. |
| 5. | ಶ್ರೀ. ಮಂಜುನಾಥ್.ವಿ | ಅಯ್ಯಪ್ಪನಗರ | ಹಾಜರಿದ್ದರು. |
| 6. | ಶ್ರೀ.ವಿಶ್ವನಾಥ್ | ಹೂಡಿ | ಹಾಜರಿದ್ದರು. |
| 7. | ಶ್ರೀ.ಸಿ.ಪಿ ಪಾಟೀಲ್ | ಸಾರ್ವಜನಿಕರು | ಹಾಜರಿದ್ದರು. |
| 8. | ಶ್ರೀಮತಿ.ಅರುಣಾರೆಡ್ಡಿ | ಹೂಡಿ | ಹಾಜರಿದ್ದರು. |
| 9. | ಶ್ರೀ.ಅನಿಲ್ ಕುಮಾರ್ | ಬಿಳಿಶೀವಾಲೆ | ಹಾಜರಿದ್ದರು. |
| 10. | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 11 | ಎಚ್.ಎಸ್ ನರೇಂದ್ರ ಕುಮಾರ್ | ಹೂಡಿ | ಹಾಜರಿದ್ದರು. |
| 12 | ಆನಂದ | ಬೆಳತ್ತೂರು | ಹಾಜರಿದ್ದರು. |
| 13 | ಮುರಳಿಧರ್.ಬಿ.ವಿ | ಅಯ್ಯಪ್ಪನಗರ ಬೆಸ್ಕಾಂ | ಹಾಜರಿದ್ದರು. |
| 14 | ರಾಜು | ಸಾರ್ವಜನಿಕರು | ಹಾಜರಿದ್ದರು. |
| 15 | ಆಕಾಶ್ | ಆರ್ ಐ | ಹಾಜರಿದ್ದರು. |
| 16 | ಸಂಪಂಗಿರಾಮಯ್ಯ | ಜೆ ಇ | ಹಾಜರಿದ್ದರು. |
| 17 | ನಾರಾಯಣಸ್ವಾಮಿ | ಸಾರ್ವಜನಿಕರು | ಹಾಜರಿದ್ದರು. |
| 18 | ಶಶಿಕುಮಾರ್ | ಸಾರ್ವಜನಿಕರು | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿ ಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

1) ಸಿ ಪಿ ಪಾಟೀಲ್ ಆರ್.ಡಬ್ಲ್ಯೂ.ಎ. ರವರು ಬೃಂಧಾವನ ಲೇಔಟ್‌ನಲ್ಲಿ ಬ್ಲಾಕ್‌ಸ್ಪಾಟ್‌ಗಳು ಇರುವುದರಿಂದ ಅದನ್ನು ತೆಗೆಯಲು ತಿಳಿಸಿದರು.
2) ಅಯ್ಯಪ್ಪನಗರ 4ನೇ ಬ್ಲಾಕ್‌ನಲ್ಲಿ ಹಸಿಕಸ ತೆಗೆಯಲು ಎರಡು ಮೂರು ದಿನಗಳಿಂದ ಆಟೋಗಳು ಬರುತ್ತಿರುವುದಿಲ್ಲ ಎಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 2ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

**II. ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1) ಅಯ್ಯಪ್ಪನಗರದಲ್ಲಿ ಕುಡಿಯುವ ನೀರು ಸರಿಯಾಗಿ ಬರುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು.
2) ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಕೊಡಿಗೇಹಳ್ಳಿ ಮುಖ್ಯರಸ್ತೆಯ ಕೊಡಿಗೇಹಳ್ಳಿ ಸರ್ಕಲ್ ಮತ್ತು ಕೇಮ್‌ಬ್ರೀಡ್ಜ್ ಜಾಗಗಳಲ್ಲಿ ಯುಜಿಡಿ ನೀರು ರಸ್ತೆಮೇಲೆ ಹರಿಯುತ್ತಿದ್ದು ಇದನ್ನು ದುರಸ್ಥಿ ಸರಿಪಡಿಸಲು ತಿಳಿಸಿದರು.
3) ಫುಡ್‌ಕೋಟ್ ಹತ್ತಿರ ಕೊಡಿಗೇಹಳ್ಳಿ ಮುಖ್ಯರಸ್ತೆ, ನೀರು ರಸ್ತೆಮೇಲೆ ಹರಿಯುತ್ತಿದ್ದು ಇದನ್ನು ದುರಸ್ಥಿ ಸರಿಪಡಿಸಲು ತಿಳಿಸಿದರು.

**ಕ್ರಂ.ಸಂ 1ರಿಂದ 3 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ).**

**ಕಾಮಗಾರಿ ಇಲಾಖೆ**

1) ಲೋಕೇಶ್ ರೆಡ್ಡಿ ಸಾದರಮಂಗಲ ರವರು ಸಾದರಮಂಗಲ ಯಿಂದ ಕೊಡಿಗೇಹಳ್ಳಿ ರಸ್ತೆ ಕೆಲಸದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತ್ತು ಹಾಗೂ  ಅಧ್ಯಕ್ಷರು, ಎಇಇ ಮುನಿಯಪ್ಪ ಮೇಜರ್ ರೋಡ್ ರವರು ಪೋನಿನ ಮುಖಾಂತರ ಚರ್ಚಿಸಿ ಎಇಇ ಮುನಿಯಪ್ಪ ಮೇಜರ್ ರೋಡ್ ರವರು ಮುಂದಿನ ಸೋಮುವಾರ ಕಾಮಗಾರಿಗಳು ಪ್ರಾರಂಭಿಸಲಾಗುವುದೆಂದು ತಿಳಿಸಿದರು ಹಾಗೂ ನಾಲ್ಕು ವಿದ್ಯುತ್ ಕಂಬಗಳು ರಸ್ತೆ ಪಕ್ಕದಲ್ಲಿ ಇರುವುದರಿಂದ ಅದನ್ನು ಡ್ರನ್ ಪಕ್ಕದಲ್ಲಿ ಸ್ಥಳಾಂತರಿಸಿ ಕೊಡಲು ತಿಳಿಸಿದರು.
2) ವಾರ್ಡ್ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ಮತ್ತು ಟೆಂಡರ್ ಪ್ರಕ್ರಿಯೆ ಆರಂಭಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಬೇಗ ಪ್ರಾರಂಭಿಸಿ ಕೆಲಸ ಮಾಡಲು ತಿಳಿಸಿದರು.
3) ಪಾಟ್‌ಹೋಲ್ ಕಾರ್ಯಕ್ರಮವನ್ನು ವಾರ್ಡ್ ವ್ಯಾಪ್ತಿಯಲ್ಲಿ ತುರ್ತಾಗಿ ಕ್ರಮ ವಹಿಸಲು ತಿಳಿಸಿದರು.
4) ವಾರ್ಡ್‌ನಲ್ಲಿ ಬ್ಯಾನರ್ಸ್ ಅತಿಯಾಗಿ ಇರುವುದು ಕಂಡುಬಂದಿರುತ್ತದೆ ಅದನ್ನು ಕೊಡಲೇ ತೆಗೆಸಲು ಸಾರ್ವಜನಿಕರು ತಿಳಿಸಿದರು.
5) ಹೂಡಿ ವ್ಯಾಪ್ತಿಯ ರಾಜುಕಾಲುಯಲ್ಲಿ ಹೂಳು ತುಂಬಿದ್ದು ಅದನ್ನು ತೆಗೆಯಲು ತಿಳಿಸಿದರು ಹಾಗೂ ಎಸ್‌ಡ್ಬ್ಯೂಡಿ ಅಧಿಕಾರಿಗಳನ್ನು ಮುಂದಿನ ಸಭೆಗೆ ಹಾಜರಾಗಲು ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**ಕ್ರಂ.ಸಂ 1ರಿಂದ 5 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್.**

**ಬೀದಿ ದೀಪ ಹಾಗೂ ಬೆಸ್ಕಾಂ**

1) ಬಿಳಿಶೀವಾಲೆ ಈ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರವುದಿಲ್ಲ ಎಂದು ಸಾರ್ವಜನಿಕರು ತಿಳಿಸಿದರು.
2) ಆನಂದ ಆರ್.ಡಬ್ಲ್ಯೂ.ಎ. ಬೆಳತ್ತೂರು ರವರು ಎಲೆಕ್ಟ್ರೀಕ್ ಪೋಲ್‌ಗಳು ದುರಸ್ಥಿಯಾಗಿರುತ್ತದೆ ಅದನ್ನು ಹೂಸದಾಗಿ ಅಳವಡಿಸಿಕೊಡಲು ತಿಳಿಸಿದರು.
3) ಬೆಸ್ಕಾಂನಿಂದ ಮರಗಳನ್ನು ಕತ್ತರಿಸಿರುವ ಮರದ ಕೊಂಬೆಗಳನ್ನು ಬೆಸ್ಕಾಂ ರವರಿಗೆ ತೆಗೆಯಲು ತಿಳಿಸಿದರು.
4) ಕೊಡಿಗೇಹಳ್ಳಿ ಮುಖ್ಯ ರಸ್ತೆಯ ಶಿಲ್ಪಿತಾರಾಯ್ ಆರ್ಪಟ್‌ಮೆಂಟ್ ರಸ್ತೆ ಪಕ್ಕದಲ್ಲಿ ಟಿಸಿ ಇರುವುದನ್ನು ಡ್ರನ್ ಪಕ್ಕದಲ್ಲಿ ಸ್ಥಳಾಂತರಿಸಿ ಕೊಡಲು ತಿಳಿಸಿದರು.

**ಕ್ರಂ.ಸಂ 1ರಿಂದ 4ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ/ಬೆಸ್ಕಾಂ)**

**ಅರಣ್ಯ ಇಲಾಖೆ:-**

ಪ್ರಸಾದ್ ಕೊಡಿಗೇಹಳ್ಳಿ ಹಾಗೂ ಆನಂದ ಬೆಳತ್ತೂರು ಆರ್.ಡಬ್ಲ್ಯೂ.ಎ. ರವರು ವಾರ್ಡ್ ವ್ಯಾಪ್ತಿಯಲ್ಲಿ ಹಳೆ ಮರಗಳು ಹಾಗೂ ಸಾರ್ವಜನಿಕರ ಮನೆಗಳಿಗೆ ತೊಂದರೆಯಾಗುವ ಮರಗಳನ್ನು ತೆಗೆಯಲು ತಿಳಿಸಿದರು.

**ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**

**(ಕ್ರಮ:-ಅರಣ್ಯ ಇಲಾಖೆ/ಬಿಬಿಎಂಪಿ)**

**Animal Husbandry:-**

- ವಾರ್ಡ್ ವ್ಯಾಪ್ತಿಯ ಕೊಡಿಗೇಹಳ್ಳಿ, ಬೆಳತ್ತೂರು ಮತ್ತು ಅಯ್ಯಪ್ಪನಗರ ಈ ಪ್ರದೇಶಗಳಲ್ಲಿ ಹಂದಿಗಳು ಹಾಗೂ ನಾಯಿಗಳ ಕಾಟ ಹೆಚ್ಚಾಗಿದ್ದು ಸಾರ್ವಜನಿಕರಿಂದ ಅತಿಯಾದ ದೂರುಗಳು ಬಂದಿರುತ್ತದೆ ಎಂದು ತಿಳಿಸಿದರು.

**(ಕ್ರಮ:-Animal Husbandry/ಬಿಬಿಎಂಪಿ)**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ